doc-524
T.P-2

ಗೋರಕ್ಷಣಿ
GORAKSHANA

8 ನೇ ವರ್ಷ — 1958 ನೇ ಏಪ್ರಿಲ್ ತಾ || 30 " April 58

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಪರಸ್ಥಳಕ್ಕೆ 6 ಆಣೆ ಮೈಸೂರಿನಲ್ಲಿ 4 ಆಣೆ ಪೋಸ್ತಕರು ರೂ 25, ಬೆಂಬಲಿಗರು ರೂ 10 (ಒಂದೇಸಾರಿ) ಮಾತ್ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಮೇವಿನ ಆಸರೆಗಳ ಅಭಿವೃದ್ಧಿ

ರಾಷ್ಟ್ರದಲ್ಲಿ ದನಕರುಗಳಿಗೆ ಒಣಹುಲ್ಲು ಮತ್ತು ಮೇವಿನ ಆಸರೆಗಳನ್ನು ಹೆಚ್ಚಿಸುವ ಪ್ರಾಮುಖ್ಯದ ದೃಷ್ಟಿಯಿಂದ, ಕೇಂದ್ರ ಆಹಾರ ಮತ್ತು ಬೇಸಾಯ ಮಂತ್ರಿ ಶಾಖೆಯವರು, ಪಶು ಗಣ್ಯವು ಕೇಂದ್ರ ಕ್ಷೇತ್ರಗಳಲ್ಲಿ ಒಣಹುಲ್ಲು ಹಾಗೂ ಮೇವಿನ ಅಭಿವೃದ್ಧಿಗಾಗಿ ಒಂದು ಮಾದರಿ ಕಾರ್ಯ ಯೋಜನೆಯನ್ನು ರೂಪಿಸಿರುವರು.

ಕಾಲುಬೇನೆ ಬಾಯಿಬೇನೆ ರೋಗಬಂದ ದನಗಳ ಆರೈಕೆ

ಬೇನೆ ಬಂದ ದನಗಳಿಗೆ ಮಲಗಲು ಹುಲ್ಲು ಮತ್ತು ಸೊಪ್ಪೆಯ ಸ್ವಚ್ಛವಾದ, ಮೆದುವಾದ ಮತ್ತು ದಪ್ಪಗಿರುವ ಹಾಸಿಗೆಯನ್ನು ಹಾಸಬೇಕು ; ತವುಡು ಅಕ್ಕಿ ಗಂಜಿ, ರುಬ್ಬಿದ ಸುಚ್ಚು ಮತ್ತು ಇಂಥ ಇನ್ನಿತರ ಮೆತ್ತನ್ನು ರುಚಿಕರವಾದ ಆಹಾರವನ್ನು ಕೊಡಬೇಕು — ತಿಳಿ ನೀರು ಕುಡಿಸಬೇಕು — ಒಕ್ಕಲುತನದ ದನಗಳು ಗುಣವಾಗುವಂತೆ ಅವುಗಳಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡಬೇಕು — ಹಯುನದ ದನಗಳಿದ್ದರೆ ಅತ್ಯಂತ ಲಕ್ಷ್ಯ ಕೊಟ್ಟು ಹಾಲನ್ನು ಕರೆಯಬೇಕು : ಅವಶ್ಯವಿದ್ದಲ್ಲಿ ಹಾಲಿನ ಸೈಫರ್ ಉಪಯೋಗಿಸಬಹುದು ; ಆದರೆ ಸಾಮಾನ್ಯವಾಗಿ ಉಪಯೋಗಿಸುವ ಮೊದಲು ಹಾಲನ್ನು ಮಂಥಿಸಬೇಕು : ಬೇನೆ ಬಂದ ದನಗಳ ಆರೈಕೆ ಮಾಡುವ ದನಗಾಹಿಗಳು ಮೇಲಿಂದ ಮೇಲೆ ನಂಜು ನಿರೋಧಕ ಪದಾರ್ಥದಿಂದ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು — ಬೊಕ್ಕೆಗಳು ಒಡೆದರೆ ರಸಿಕೆ ಹತ್ತದಂತೆ ಜಾಗರೂಕತೆಯನ್ನು ವಹಿಸಬೇಕು ; ಹುಣ್ಣಿನಲ್ಲಿ ನೊಣಗಳು ತತ್ತಿಗಳನ್ನು ಇಡದಂತೆ ನೋಡಿಕೊಳ್ಳಬೇಕು — ಒಳ್ಳೆಯ ಚಿಕಿತ್ಸೆ ನಡೆಸಬೇಕು.

— ಮೈಸೂರು ವಾರ್ತಾ ಸಂಗ್ರಹ

ರಷ್ಯಾದ ರಾಜ್ಯ ಕೃಷಿ ಕ್ಷೇತ್ರದಲ್ಲಿ

ಇಲ್ಲಿಯ ಕಾರ್ಮಿಕರು ಒಂದು ಹೆಚ್ಚು ಕಷ್ಟಕರವಾದ ಸಮಸ್ಯೆಯನ್ನು ಬಿಡಿಸಿದರು — ತಮ್ಮ ಕೃಷಿಕ್ಷೇತ್ರವನ್ನು ಹಾಲಿನ ಕಾರ್ಖಾನೆಯನ್ನಾಗಿ ಪರಿವರ್ತಿಸಿದರು ; ಹೌದು, ಅರ್ಥಶಃ ಕಾರ್ಖಾನೆಯೇ : ಏಕೆಂದರೆ ಇದು ಮಾಸ್ಕೋ ಜನತೆಗೆ ವರ್ಷವಿಡೀ ಹಾಲಿನ ಸಂಬರಾಜು ಮಾಡಬಲ್ಲ ಸಂಸ್ಥೆಯಾಗಿದೆ ; ಈ ಕ್ಷೇತ್ರ ಹಸುಗಳ ಕೆಲವು ಋತುಗಳಲ್ಲೇ ಈಯುವ ಸಹಜ ಸ್ವಭಾವವನ್ನೂ ಗೆದ್ದಿದೆ; ಹಸು ಕರುಹಾಕುವುದು ಮುಖ್ಯವಾಗಿ ವಸಂತ ಋತುವಿನಲ್ಲಿ ಎಂಬುದು ಪ್ರತಿಯೊಬ್ಬ ರೈತನಿಗೂ ತಿಳಿದ ಬಸಯು ; ಆಗ ರಸಭರಿತವಾದ ಹಸುರು ಹುಲ್ಲು ಅಧಿಕ ಪ್ರಮಾಣದಲ್ಲಿ ಸಿಕ್ಕುತ್ತದೆ; ಬೇಸಿಗೆಯಲ್ಲಿ ಹಾಲಿನ ಹುಟ್ಟುವಳಿ ಕಮ್ಮಿಯಾಗುತ್ತದೆ ಚಳಿಗಾಲದಲ್ಲಿ ಅತ್ಯಲ್ಪ ಹಾಲು ಕೊಡುತ್ತವೆ ; ಏಕೆ ಹೀದಾಗುತ್ತೆ ? ರಶಿಯಾ ರೈತ ಹೇಳುತ್ತಾನೆ– ' ಹಸುವಿನ ಹಾಲು ಅದರ ನಾಲಿಗೆಯ ತುದಿಯಲ್ಲಿರುತ್ತದೆ ' : ಬೇರೆ ಮಾತಿನಲ್ಲಿ ಹುಟ್ಟುವಳಿಯು ಮೇವನ್ನು ಅನಲಂಬಿಸಿರುತ್ತದೆ.

— ಸೋವಿಯತ್ ದೇಶ

× ಕುರಿಗಳ ಸಂಖ್ಯೆಯಲ್ಲಿ ಸೋವಿಯೆಟ್ ಒಕ್ಕೂಟಕ್ಕೂ (ರಷ್ಯಾ) ಆಗ್ರಸ್ಥಾನ ಸಲ್ಲುತ್ತದೆ : 1956 ರಲ್ಲಿ ಅಲ್ಲಿ 12 ಕೋಟಿ ಕುರಿಗಳಿದ್ದವು ; ಅಲ್ಲಿಂದೀಚೆಗೆ ಈ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಬೆಳೆದಿದೆ — ಆಸ್ಟ್ರೇಲಿಯಾದಲ್ಲಿ (ಅದು ಕುರಿಗಳಿಗೆ ಹೆಸರಾದ ದೇಶ) 13 ಕೋಟಿ 90 ಲಕ್ಷ ಕುರಿಗಳಿದ್ದವು.

ಪಶುಪಾಲನಾ ಮಸೂದೆ

ಉಪಯುಕ್ತವಿಲ್ಲದ ಹಸು ಮತ್ತು ದನಗಳ ಹತ್ಯೆಯನ್ನು ನಿಷೇಧಿಸುವ ಪಶುಪಾಲನಾ ಮಸೂದೆ ವಿಧಾನಸಭಾ ಶಾಸನ ಸಭೆಯಲ್ಲಿ ಮಂಜೂರಾಯಿತು.

ಗುಣಾಂಶ ಅಗತ್ಯ

ಜಾನುವಾರುಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕಿಂತ ಜಾನುವಾರುಗಳ ನೀರು ಮೇವುಗಳು ಮತ್ತು ಹಾಲಿನ ಗುಣಾಂಶಗಳನ್ನು ಸುಧಾರಿಸುವುದು ನಮ್ಮ ಗುರಿಯಾಗಿರಬೇಕು ಎಂದು ಆಹಾರ ಮತ್ತು ಬೇಸಾಯ ಶಾಖೆಯ ಮಂತ್ರಿಗಳಾದ ಶ್ರೀ ಅಜಿತಪ್ರಸಾದ ಜೈನ್ ನವದೆಹಲಿಯಲ್ಲಿ ಇಲ್ಲಿ ಸೇರಿದ್ದ ಕೇಂದ್ರಗೋಸಂವರ್ಧನ ಪರಿಷತ್ತಿನ ಸಭೆಯಲ್ಲಿ ಹೇಳಿರುವರು 51 ನೆಯ ಇಸ್ವಿಯಲ್ಲಿ ಭಾರತದಲ್ಲಿ 15-51 ಕೋಟಿ ಜಾನುವಾರುಗಳಿದ್ದವೆಂದೂ, 56 ರಲ್ಲಿ ಈ ಸಂಖ್ಯೆಯು 15 89 ಕೋಟಿಗಳಿಗೆ ಏರಿದೆಯೆಂದೂ ನುಡಿದರು.

ಆರೋಗ್ಯ ಮಂತ್ರಿಗಳಿಂದ ಬಹುಮಾನ ವಿತರಣೆ

ಮೈಸೂರು ಸರ್ಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರು ಈ ತಿಂಗಳು 10 ನೆಯ ದಿನಾಂಕದಂದು ಗಾರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಜರುಗಿದ ಜಾನುವಾರುಗಳ ಪ್ರದರ್ಶನದಲ್ಲಿ ಪಾರಿತೋಷಕಗಳನ್ನು ಹಂಚಿದರು ರೈತರ ಸ್ಥಿತಿಯನ್ನು ಉತ್ತಮಗೊಳಿಸುವ ಬಗ್ಗೆ ಅವರಿಗೆ ಹಿತವಚನವಿತ್ತರು. ಈ ಪ್ರದೇಶದಲ್ಲಿಯು ದನಗಳು ಇರಬೇಕಾದಷ್ಟು ಸದೃಢವೂ ಮತ್ತು ಸುಂದರವಾಗಿಲ್ಲ. ಜನರು ಮತ್ತು ದನಗಳು ಸದೃಢವಾಗಿರುವದು ಅವಶ್ಯವಿದೆ ಎಂದರು. ಮುಂದಿನ ವರ್ಷ ಸದೃಢ ವೂ ಮತ್ತು ಸುಂದರ ವೂ ಆದ ದನಗಳು ಇಲ್ಲಿ ಸೇರುವವೆಂದು ನಾನು ಆಶಿಸುತ್ತೇನೆ ಎಂದರು

ಕ್ವಿಲಾನ್ ಬಳಿ ಸಸ್ಯಮಾರಾಟ್ಟದಲ್ಲಿ ಮತ್ತು ತಿರುವೇಂದ್ರಂನ ಕರಮಾನದಲ್ಲಿ ವಿಷ ವಿಶ್ರಿತ ಆಹಾರದಿಂದ 74 ಜನರು ಸತ್ತಿದ್ದಾರೆ

ಅಭಿವೃದ್ಧಿ ಯೋಜನೆಗಳು

1957-58 ನೇ ಸಾಲಿಗೆ ' ಎನಿಮಲ್ ಹಸ್ಬಂಡ್ರಿ ' ಗೆ ಈ ಯೋಜನೆಗಳನ್ನೂ ಸರ್ಕಾರ ಮಂಜೂರ್ಮಾಡಿತು —

ಪ್ರಾಂತ ಮಟ್ಟದಲ್ಲಿ ದನಗಳ ಪ್ರದರ್ಶನ ನಡೆಸಲು ರೂ. 10 ಸಾವಿರ ಅಂದಾಜಿನ ಮಂಜೂರು.

ನಗರ ಮತ್ತು ಪಟ್ಟಣಗಳ ಬಡಹಸುಗಳ ರಕ್ಷಣೆಗೆ ರೂ 37400 ಅಂದಾಜಿನ ಮಂಜೂರು.

ರೂ. 43600 ಅಂದಾಜಿನಲ್ಲಿ ಗೋಸದನ ಸ್ಥಾಪನೆಯು ಮಂಜೂರು.

ಬೆಂಗಳೂರು ಮತ್ತು ಕುಡಿಗೆಯಲ್ಲಿ ಕ್ರಮವಾಗಿ ರೂ 104300 ಮತ್ತು ರೂ 103000 ಅಂದಾಜಿನಲ್ಲಿ ಹಾಲಿನ ಸಂಬರಾಜಿನ ಮಂಜೂರು.

ಮೈಸೂರು ಪ್ರಾಂತದಲ್ಲಿ ವೆಟರ್ನರಿ ಕಾಲೇಜು ಸ್ಥಾಪನೆಗೆ ಸರ್ಕಾರ ಆಗಲೇ ಮಂಜೂರ್ಮಾಡಿದೆ.

ಕಾಂಗ್ರೆಸು ಪಾರ್ಲಿಮೆಂಟರಿ ಸಭೆಯೊಂದರಲ್ಲಿ ಪಂ|| ನೆಹರು ಮಾತನಾಡುತ್ತಾ, ದೀರ್ಘ ಸೇವೆಗಾಗಿ ಅಧಿಕಾರದಿಂದ ಸ್ವತಂತ್ರವಾಗುವವಾಗಿಯೂ, ಈ ವಿಷಯವನ್ನು ಪಕ್ಷದ ಮುಂದಿಟ್ಟು ಮಾರ್ಗದರ್ಶನ ಕೇಳುವದಾಗಿ ತಿಳಿಸಿದರೆಂದು ದೆಹಲಿ ವಾರ್ತೆ.

ಪಂ|| ನೆಹರು ಹೇಳಿಕೆಯ ಬಗ್ಗೆ ಪರಿಶೀಲನೆ ಮಾಡಲು ಕಾಂಗ್ರೆಸು ಪಕ್ಷದ ವಿಶೇಷ ಸಭೆ ಈ ದಿನ ಕೇಂದ್ರ ಹಾಲಿನಲ್ಲಿ ನಡೆಯುವದೆಂದು ನವದೆಹಲಿ ಪತ್ರಿಕೆಯೊಂದು ತಿಳಿಸುತ್ತದೆ

ಈ ವರ್ಷ ಪಂ|| ನೆಹರು ರವರನ್ನು ಯಾಕ್ಕೆ ಭೇಟಿಕೊಡುವರೆಂದು ವಿದೇಶದ ವಾರ್ತೆ.

ಮೈಸೂರು ನಗರದಲ್ಲಿ ಗೋಪಾಲನೆಯನ್ನು ಮಾಡುವವರಿಗೆ ಭಯ ದೂರವಾಗಬೇಕು

ದನದ ಮಾಂಸದ ಮಾರಾಟ ನಿಲ್ಲಿಸಿದರೆ ಗೋವಧೆ ಆಗುವುದು ತಪ್ಪಿಹೋಗಲು ಸಾಧ್ಯ

ಶ್ರೀ ಎ. ಕೃಷ್ಣಮೂರ್ತಿರಾಯರು ಮಾತನಾಡುತ್ತಾ, ಹಸುಗಳನ್ನು ಸಾಕುವವರಿಗೆ ಬಹಳಷ್ಟೀತಿಯಾಗಿದೆ. ಮೊನ್ನೆ ತಾನೆ ಸಹಸ್ರ ರೂ. ಬೆಲೆ ಬಾಳುವ ಹಸುವನ್ನು 'ಕೊಂದಿದ್ದಾರೆ' ಜೊತೆಗೆ ಅದು ಕೆನೆಯಾಗಿತ್ತು. ಈ ರೀತಿ ಹಸುಗಳ ಕೊಲೆಯಾದರೆ ಹಾಲು ಹೇಗೆ ಸಿಗುವದು. ಈ ವಿಷಯದಲ್ಲಿ ಪೋಲೀಸರಿಗೆ ಬರೆಯಬೇಕು ಎಂದರು.

ಮೇಲ್ಕಂಡಂತೆ ಕಾಂಗ್ರೆಸು ಪಕ್ಷದ ನಾಯಕರು ಕಳೆದ ಶನಿವಾರ ಸಮಾವೇಶ ವಾಗಿದ್ದ ಮೈಸೂರು ಸೌಂಸಭೆಯ ಸಾಮಾನ್ಯ ಸಭೆಯಲ್ಲಿ ತಿಳಿಸಿದರು.

ಕಾಂಗ್ರೆಸು ಪಕ್ಷದ ಶ್ರೀ ಮಹಮದ್ ಯಾಕೂಬ್‌ರವರು ಮಾತನಾಡಿ, ಗೋವಧೆ ಆಗಿದ್ದನ್ನು ಕೇಳಿ ನಮಗೆ ಬಹಳ ದುಃಖವಾಯಿತು. ಗೋಮಾಂಸ ಮಾರಾಟ ಪೂರ್ಣ ನಿಶೇಧಿಸಿದರೆ, ಗೋವಧೆ ಆಗುವದು ತಪ್ಪುವದು ಎಂದಿರುವರು.

[ಕಳೆದ ಶಾ॥ 21 ರಲ್ಲಿ ಮಾತೃ ಸ್ವರೂಪಿಣಿಯಾದ ಗೋವಿನ ಭೀಕರ ಕೊಲೆ ಆಗಿರುವ ಬಗ್ಗೆ 'ಗೋರಕ್ಷಣ' ಸಂತಾಪಿಸಿ, ಮುಂದೆ ಇಂಥಹ ಹೇಯ ಕೃತ್ಯಗಳು ಸಂಭವಿಸಿದಂತೆ ಪೋಲೀಸಿನವರು, ಸಾರ್ವಜನಿಕರು, ಸಂಬಂಧಪಟ್ಟವರು ಜಾಗರೂಕರಾಗಿರಬೇಕೆಂದು ಕೋರುತ್ತದೆ.]

ಪಶು ಚಿಕಿತ್ಸಾ ಕಾರ್ಯ

ಪಶು ಚಿಕಿತ್ಸಾ ಶಾಖೆಯವರು ಕಳೆದ ಡಿಸೆಂಬರಿನಲ್ಲಿ ಕಾರವಾರ ಹಾಗು ಬೆಳಗಾವಿ ಜಿಲ್ಲೆಗಳಲ್ಲಿ 12485 ದನಗಳಿಗೆ ಔಷಧೋಪಚಾರ ನೀಡಿದರು. (ಮೈ. ವಾ)

ಗೋಮಾಂಸ ನಿಶೇಧ ಸರಿ

ಎಲ್ಲ ವಯಸ್ಸಿನ ಹಸುಗಳು ಮತ್ತು ಹಸು.ಎಸ ಕರುಗಳು ಇವುಗಳ ವಧೆಯು ನಿಶೇಧವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದು, ಭಾರತದ ಘಟನೆಯು 48 ನೆಯ ವಿಧಿಯಲ್ಲಿರುವ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ಗೆ ಈ ನಿಶೇಧ ಅನುಗುಣವಾಗಿದೆ ಎಂದು ತಿಳಿಸಿದೆ.

ಗೋಮಾಂಸ ಟ್ಟಿಂಡರ್

ಭಿಲೈ ಉಕ್ಕಿನ ಫ್ಯಾಜಿಕ್ಟ್ರಿಗೆ ಸಂಬಂಧಿಸಿದ ಅಡಿಗೆ ಮನೆ ಸಂಬಂಧದಲ್ಲಿ ಹೊರಡಿಸಿರುವ ಟೆಂಡರು ನೋಟೀಸು ರಾಯಪುರದಲ್ಲಿ ಕೋಲಾಹಲವುಂಟು ಮಾಡಿದೆ. ಮಾಂಸದ ಆಹಾರವನ್ನು ಮುಖ್ಯವಾಗಿ ಗೋಮಾಂಸದಿಂದ ತಯಾರಿಸಬೇಕೆಂದು ನೋಟೀಸಿನಲ್ಲಿ ತಿಳಿಸಿದೆ. ಮಧ್ಯ ಪ್ರದೇಶದಲ್ಲಿ ಪೂರ್ಣವಾಗಿ ಗೋಹತ್ಯೆ ಪ್ರತಿಬಂಧಿಸಲಾಗಿದೆ. ಭಿಲೈನಲ್ಲಿ ಗೋಮಾಂಸ ಭಕ್ಷಿಸಲಾಗುತ್ತಿದೆ ಎಂದು ಹಾಡಿದ್ದ ವರ್ತಮಾನವನ್ನು ಅಲ್ಲಿನ ಅಧಿಕಾರಿಗಳೇ ಖಂಡಿಸಿದ್ದರು. ಫ್ಯಾಜಿಕ್ಟ್ರಿನಲ್ಲಿ ಕೆಲಸ ಮಾಡುತ್ತಿರುವ ವಿದೇಶಿಯರಿಗಾಗಿ ಗೋಮಾಂಸ ವಿದೇಶಗಳಿಂದ ಟಿನ್ನುಗಳಲ್ಲಿ ಬರುತ್ತಿರುವುದೆಂದು ಸಬೂಬು ಹೇಳಲಾಗುತ್ತಿದೆ ಆದರೆ ಈ ವಿಷಯವನ್ನು ಟೆಂಡರು ನೋಟಿಸಿನಲ್ಲಿ ತಿಳಿಸಿಲ್ಲ.

ವುಡ್‌ಲ್ಯಾಂಡ್ಸ್ 25-4-58 ರಿಂದ

ಭಾರತಾದ್ಯಂತ ಪ್ರಶಂಸಿಸಲ್ಪಟ್ಟಿರುವ, ಅತ್ಯುದ್ರೇಕ ಸಾಂಸಾರಿಕ ನಾಟಕ ಚಿತ್ರಣ

ದೇವರ್ ಬಾಬಿ ಹಿಂದಿ

ತಾರಾಗಣ : ಬಾಲರಾಜ್ ಸಾಹ್ನಿ, ಮಾಲಾ ಸಿನ್ಹಾ, ರಾಜೇಂದ್ರ ಕುಮಾರ್

ರಾಧಾ ಕಿಷನ್ [ದಿನವಹಿ 3 ಪ್ರದರ್ಶನಗಳು]

ಉಮಾ — 29-4-58 ರಿಂದ

ಪೋರ್ಟರ್ ಕಂದನ್

ಎಂ. ಕೆ. ರಾಧ, ಜಿ ವರಲಕ್ಷ್ಮಿ, ಸಂಬಿಯಾರ್

ಪ್ರತಿ ದಿನ 3 ಆಟಗಳು ತಮಿಳು ಚಿತ್ರ

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

SHAKTI

SUDHA

A Superb Tonic

ಅಪೆರಾ — 2-5-58 ರಿಂದ

ಮನೆ ತುಂಬಿದ ಹೆಣ್ಣು (ಕನ್ನಡ)

ಪಾತ್ರ — ಮಾಧವರಾವ್, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ

ಭವಾನಿದೇವಿ, ಜಯಶ್ರೀ, ಉದಯಾನಿ ಲಕ್ಷ್ಮಿ, ಲಲಿತಾ ರಾವ್

— ಪ್ರತಿ ದಿನ 3 ಆಟಗಳು —

Edited, Printed & Published by Dharma Prachara Nurse M S Krishna Rao, at the Satyavadi Press Chamarajapuram, Mysore